# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 44 |
| 2 | ಸದಸ್ಯರ ಹೆಸರು | : | ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 16-09-2021 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಡೆಸುತ್ತಿರುವ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳ ವಿವರ ಕೆಳಕಂಡಂತೆ ಇರುತ್ತದೆ. |

| ಕ್ರ.ಸಂ. | ಶಾಲಾ ಕಾಲೇಜಿನ ವಿವರಗಳು | ಇರುವ ಸಂಖ್ಯೆಗಳು |
|---|---|---|
| 1. | ಪ್ರಾಥಮಿಕ ಶಾಲೆ | 16 |
| 2. | ಪ್ರೌಢಶಾಲೆ | 33 |
| 3. | ಪದವಿ ಪೂರ್ವ ಕಾಲೇಜು | 15 |
| 4. | ಪದವಿ / ಸ್ನಾತಕೋತ್ತರ ಪದವಿ ಕಾಲೇಜು | 04 |
| ಒಟ್ಟು | | **68** |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ಶಾಲಾ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋಧಕೇತರೆಷ್ಟು; (ವಿವರ ನೀಡುವುದು) | ಸದರಿ ಶಾಲಾ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ವಿವರಗಳು ಈ ಕೆಳಕಂಡಂತೆ ಇರುತ್ತದೆ. |

**ಪ್ರಾಥಮಿಕ ಶಾಲೆ**

| ಕ್ರ.ಸಂ. | ವಿವರಗಳು | ಕಾರ್ಯನಿರ್ವಹಿಸುತ್ತಿರುವ ಬೋಧಕ / ಬೋಧಕೇತರ ಸಂಖ್ಯೆ |
|---|---|---|
| 1. | ಮುಖ್ಯ ಶಿಕ್ಷಕರು | 05 |
| 2. | ಸಹ ಶಿಕ್ಷಕರು | 34 |
| 3. | ದೈಹಿಕ ಶಿಕ್ಷಕರು | 05 |
| 4. | ಬೋಧಕೇತರ ಸಿಬ್ಬಂದಿಗಳು | 10 |
| **ಒಟ್ಟು** | | **54** |

**ಪ್ರೌಢಶಾಲೆ**

| ಕ್ರ.ಸಂ. | ವಿವರಗಳು | ಕಾರ್ಯನಿರ್ವಹಿಸುತ್ತಿರುವ ಬೋಧಕ / ಬೋಧಕೇತರ ಸಂಖ್ಯೆ |
|---|---|---|
| 1. | ಮುಖ್ಯ ಶಿಕ್ಷಕರು | 17 |
| 2. | ಸಹ ಶಿಕ್ಷಕರು | 36 |
| 3. | ಕರಕುಶಲ | 04 |
| 4. | ಬೋಧಕೇತರ ಸಿಬ್ಬಂದಿಗಳು | 25 |
| ಒಟ್ಟು | | **82** |

...2.

**ಪದವಿ ಪೂರ್ವ ಕಾಲೇಜು**

| ಕ್ರ.ಸಂ. | ವಿವರಗಳು | ಕಾರ್ಯನಿರ್ವಹಿಸುತ್ತಿರುವ ಬೋಧಕ / ಬೋಧಕೇತ್ತರ ಸಂಖ್ಯೆ |
|---|---|---|
| 1. | ಪ್ರಾಂಶುಪಾಲರು | 06 |
| 2. | ಉಪನ್ಯಾಸಕರು | 68 |
| 3. | ಬೋಧಕೇತರ ಸಿಬ್ಬಂದಿಗಳು | 15 |
| | ಒಟ್ಟು | **89** |

ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು / ಉಪನ್ಯಾಸಕರುಗಳೇ ಪ್ರಭಾರದ ಮೇಲೆ ಪದವಿ ಕಾಲೇಜುಗಳಲ್ಲಿಯೂ ಕಾರ್ಯನಿರ್ವಹಿಸುತ್ತಿರುತ್ತಾರೆ.

ಇ) ಸದರಿ ಶಾಲಾ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಬೋಧಕ/ ಬೋಧಕೇತರೆಷ್ಟು; (ವಿವರ ನೀಡುವುದು)

ಸದರಿ ಶಾಲಾ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ. | ಶಾಲಾ ಕಾಲೇಜಿನ ವಿವರಗಳು | ಇರುವ ಸಂಖ್ಯೆಗಳು |
|---|---|---|
| 1. | ಪ್ರಾಥಮಿಕ ಶಾಲೆ | 73 |
| 2. | ಪ್ರೌಢಶಾಲೆ | 248 |
| 3. | ಕಂಪ್ಯೂಟರ್ / ಕರಕುಶಲ | 31 |
| 4. | ಪದವಿ ಪೂರ್ವ ಕಾಲೇಜು | 126 |
| 5. | ಪದವಿ ಕಾಲೇಜು | 57 |
| 6. | ಸ್ನಾತಕೋತ್ತರ ಪದವಿ ಕಾಲೇಜು | 06 |
| | ಒಟ್ಟು | **541** |

ಹೊರಗುತ್ತಿಗೆ ಆಧಾರದ ಮೇಲೆ ಯಾರು ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ.

ಈ) ಈ ಶಾಲಾ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಪ್ರತಿ ತಿಂಗಳು ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಾರಣ ಸಹಿತ ವಿವರ ನೀಡುವುದು)

ಸದರಿ ಶಾಲಾ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಜುಲೈ–2021ರ ಮಾಹೆಯವರೆಗೂ ವೇತನ ಪಾವತಿ ಮಾಡಲಾಗಿರುತ್ತದೆ. ಆಗಸ್ಟ್–2021ರ ಮಾಹೆಯ ವೇತನ ಬಿಡುಗಡೆಗೆ ಸಂಬಂಧಿಸಿದಂತೆ ಕಡತವು ವ್ಯವಹರಣೆಯಲ್ಲಿರುತ್ತದೆ.

. . .3.

| | | |
|---|---|---|
| ಉ) | ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು ಕೋರ್ಟ್ ಆದೇಶದಂತೆ ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಯ ಆಡಳಿತಕ್ಕೊಳಪಟ್ಟಂತೆ, ಒಟ್ಟು 161 ಶಾಲಾ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸುಮಾರು 615 ಮಂದಿ ಶಿಕ್ಷಕರು / ಉಪನ್ಯಾಸಕರು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಪೈಕಿ 81 ಶಿಕ್ಷಕರು / ಉಪನ್ಯಾಸಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇವೆಯಲ್ಲಿ ಖಾಯಂ ಶಿಕ್ಷಕರನ್ನಾಗಿ ವಿಲೀನಗೊಳಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP Nos.27420-27424/2016 (S-REG) C/W WP Nos. 11992 & 12025-12099/2015 (S-REG) ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ವಿಚಾರಣೆ ನಡೆಸಿ, ದಿನಾಂಕ:28-11-2016ರಂದು ಈ ಕೆಳಕಂಡಂತೆ ಆದೇಶವನ್ನು ನೀಡಿತ್ತು.<br><br>"Writ Petition are disposed of by directing 3rd respondent to forward the resolution passed in the second council meeting held on 09.08.2016 bearing Subject No.26(210)/ 2016-17 Annexure-M to Respondents 1 and 2 expeditiously at any rate within the outer limit of two months from the date of receipt of certified copy of this order. Said resolution being forwarded to Respondents 1 and 2, they shall examine the same on the basis of the existing rules and Government orders and pass suitable and appropriate orders expeditiously, at any rate, not later than four months from the date of receipt of this order.<br><br>It is also made clear that till consideration of such orders by Respondents 1 and 2, the petitioners services shall not be terminated by 3rd respondent. Respondents 1 to 3 shall also take into consideration the representations submitted by the petitioners individually and through the association and also the law laid down by the Apex Court in Civil Appeal No.213/ 2013 on 26.10.2016 in the matter of STATE OF PUNJAB AND OTHERS Vs. JAGJIT SINGH AND OTHERS while examining the proposal that would be Forwarded by 3rd respondent pursuant to resolution dated 09.08.2016. However, it is made clear that no opinion is expressed on merits. Ordered according." |

. . .4.

| | | |
|---|---|---|
| | | ಮೇಲ್ಕಂಡ ಆದೇಶದಂತೆ, ಬಿ.ಬಿ.ಎಂ.ಪಿ.ಯ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕರನ್ನು ಖಾಯಂ ಶಿಕ್ಷಕರನ್ನಾಗಿ ವಿಲೀನಗೊಳಿಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ದಿನಾಂಕ:29-06-2017ರಂದು ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿದ್ದರು.<br><br>ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 33 ಎಂಎನ್‌ಜಿ 2017, ದಿನಾಂಕ: 07-09-2017 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದ ವಿಷಯ ಸಂಖ್ಯೆ: 26(210)/16-2016-17, ದಿನಾಂಕ: 09-08-2016ರಲ್ಲಿ ಕೈಗೊಂಡಿರುವ ನಿರ್ಣಯದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕರ ನೇಮಕಾತಿಯು ಚಾಲ್ತಿಯಲ್ಲಿರುವ ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿರುವ ಸಂಬಂಧ ಪಾಲಿಕೆಯ ಆಯುಕ್ತರು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 29-06-2017ರ ಪ್ರಸ್ತಾವನೆಯನ್ನು ತಿರಸ್ಕರಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ. |

**ನಅಇ 184 ಎಂಎನ್‌ಜಿ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ